# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-6921/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 16/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಎ.ವ್ಹಿ. ರಮಾನಂದ ರಾವ್, ಎಲ್ಲೂರು ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಎ.ವ್ಹಿ. ರಮಾನಂದರಾವ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ಜಿಲ್ಲೆಯ, ಉಡುಪಿ ತಾಲ್ಲೂಕಿನ ಎಲ್ಲೂರಿನ ಶ್ರೀ ವಿಶ್ವೇಶ್ವರ ದೇವಸ್ಥಾನವು ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಡುತ್ತಿದ್ದು, ಎದುರುದಾರರಾದ ಶ್ರೀ ಪ್ರಶಾಂತ್ ಕುಮಾರ್ ಶೆಟ್ಟಿ, ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ವಿಶ್ವೇಶ್ವರ ದೇವಸ್ಥಾನ ಇವರು ಸಾರ್ವಜನಿಕ ನೌಕರರಾಗಿರುತ್ತಾರೆ. ದೇವಸ್ಥಾನದ ಸಮಸ್ತ ಕಾರ್ಯಾಚರಣೆಗಳು ಇವರ ಮೇಲ್ವಿಚಾರಣೆಯಲ್ಲೇ ನಡೆಯುತ್ತದೆ. ಈ ದೇವಸ್ಥಾನದಲ್ಲಿ ಕಾರ್ತಿಕ ಪೂಜೆಗಾಗಿ ನಿಗಧಿತ ಹಣವನ್ನು ಭಕ್ತಾಧಿಗಳಿಂದ ಪಡೆದು ಕಾರ್ತಿಕ ಪೂಜೆಯ ವಿಧಿವಿಧಾನಗಳನ್ನು ಸರಿಯಾಗಿ ನಿರ್ವಹಿಸದೇ, ಬೇಕಾಬಿಟ್ಟಿ ಪೂಜೆ ಮಾಡಿ ಮೋಸ ಮಾಡಲಾಗುತ್ತಿದೆ. ಈ ವಿಷಯವನ್ನು ದೂರುದಾರರು, ಎದುರುದಾರರ ಗಮನಕ್ಕೆ ತಂದರೂ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ. ಇದು ಭಕ್ತಾಧಿಗಳ ವಿಶ್ವಾಸಕ್ಕೆ ದ್ರೋಹಬಗೆದಂತಾಗಿರುತ್ತದೆ. ಆದ್ದರಿಂದ, ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ಶ್ರೀ ವಿಶ್ವೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಪೂಜೆಯನ್ನು ಅಲ್ಪ ಪ್ರಮಾಣದಲ್ಲಿ ಮಾಡಿ ಮುಗಿಸುತ್ತಾರೆಂದು ದೂರಿರುತ್ತಾರೆ. ದೂರುದಾರರಾದ ಶ್ರೀ ರಮಾನಂದರಾವ್ ರವರು ಈ ಹಿಂದೆ

Sd/-

ನೀಡಿದ್ದ ದೂರಿನ ಬಗ್ಗೆ ದಿ:21/08/2014 ರಂದು ವ್ಯವಸ್ಥಾಪನ ಸಮಿತಿ, ದೇವಳದ ತಂತ್ರಿ ವರ್ಗ, ಅರ್ಚಕರು ಮತ್ತು ನೌಕರರ ಸಭೆಯನ್ನು ಕರೆದು, ದೂರುದಾರರು ನೀಡಿದ ದೂರಿನ ಬಗ್ಗೆ ಮತ್ತು ಕಾರ್ತಿಕ ಪೂಜೆಯ ಸೇವೆ ನಡೆಸುವ ಬಗ್ಗೆ ಚರ್ಚಿಸಿ, ಅವರಿಂದ ಲಿಖಿತ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ. ಸದರಿ ಲಿಖಿತ ಹೇಳಿಕೆಯಲ್ಲಿ ಭಕ್ತಾಧಿಗಳಿಂದ ಸ್ವೀಕೃತವಾದ ಕಾರ್ತಿಕ ಪೂಜಾ ಸೇವಾ ಶುಲ್ಕವನ್ನು ಆಯಾ ಸೇವೆಗೆ ವಿನಿಯೋಗ ಮಾಡುತ್ತಿದ್ದು, ಕಾರ್ತಿಕ ಪೂಜೆಯ ಸೇವೆಯು ಸಾಮೂಹಿಕವಾಗಿ ಬೆಳಿಗ್ಗೆ, ಮಧ್ಯಾಹ್ನ ಹಾಗೂ ಸಂಜೆ ಮೂರು ಹೊತ್ತು ದಿನನಿತ್ಯವು ನಡೆಯುತ್ತ ಬಂದಿದ್ದು, ಇನ್ನು ಮುಂದಕ್ಕೆ ಉತ್ತಮ ರೀತಿಯಲ್ಲಿ ನಡೆಸಲು ಹೆಚ್ಚುವರಿಯಾಗಿ ಹರಿವಾಣ ಆರತಿ ಅಥವಾ ದೀಪ ಆರತಿ ಮಾಡಬಹುದಾಗಿರುತ್ತದೆ. ಹಾಗೂ ಭಕ್ತಾಧಿಗಳಿಗೆ ಮೂರು ಹೊತ್ತು ಕಾರ್ತಿಕ ಪೂಜಾ ಸೇವೆ ನಡೆಯುವುದರಿಂದ ಕೃಷ್ಣಾರ್ಪಣ ಬಿಟ್ಟು ಕಲ್ಲು ಸಕ್ಕರೆ ಪ್ರಸಾದವನ್ನು ಕೊಡಬಹುದೆಂದು ಅಭಿಪ್ರಾಯಪಡಲಾಗಿದೆ. ಈ ಬಗ್ಗೆ ದಿ:11/09/2014 ರಂದು ವಿವರವಾದ ವರದಿಯನ್ನು ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲಾಗಿರುತ್ತದೆ. ದೇವಳದ ದಾಖಲೆಯನ್ನು ಪರಿಶೀಲಿಸಿದಾಗ ಈ ಹಿಂದೆ ದಿ: 31/07/1972 ಮತ್ತು 08/07/1974ರ ಆಡಳಿತ ಮಂಡಳಿಯ ಸಭೆಯಲ್ಲಿ ಭಂಡಾರಕ್ಕೆ ಬರುತ್ತಿದ್ದ ಕಾರ್ತಿಕ ಪೂಜೆ ಬಾಬ್ತು ಖರ್ಚು 32 ಪೈಸೆಯನ್ನು ತೆಗೆದು ಸಂಪೂರ್ಣ ಹಣವನ್ನು ಭಂಡಾರಕ್ಕೆ ಜಮೆ ಪಡಿಸಿ ನೌಕರರಿಗೆ ಕಮೀಷನ್ ಅನ್ನು ವಾರದ ಕೊನೆಯಲ್ಲಿ ಅಂದರೆ ಶನಿವಾರದಂದು ಸಂಬಳದ ರೂಪದಲ್ಲಿ ಬಟವಾಡೆ ಮಾಡುವುದೆಂದು ಸರ್ವಾನುಮತದಿಂದ ತೀರ್ಮಾನ ಕೈಗೊಳ್ಳಲಾಗಿರುತ್ತದೆ. ಆಡಳಿತ ಮಂಡಳಿಯ ಸಭೆಯಲ್ಲಿ ಪ್ರಕರಣದ ದೂರುದಾರರಾದ ಶ್ರೀ ಎ.ವ್ಹಿ. ರಮಾನಂದ ರಾವ್ ರವರು ಸದಸ್ಯರಾಗಿದ್ದು, ಸದರಿ ಸಭೆಯಲ್ಲಿ ಹಾಜರಿದ್ದು, ನಿರ್ಣಯಕ್ಕೆ ಸಹಿ ಮಾಡಿರುತ್ತಾರೆ. ಅದೇ ರೀತಿ ಹಿಂದಿನಿಂದಲೂ ಸೇವಾ ಪಟ್ಟಿಯಲ್ಲಿ ಕಾರ್ತಿಕ ಪೂಜೆಯ ಸೇವಾ ಶುಲ್ಕವನ್ನು ಭಂಡಾರಕ್ಕೆ ತೆಗೆದುಕೊಳ್ಳುವ ಬಗ್ಗೆ ನಮೂದಿಸಿ ಮಂಜೂರಾತಿ ಪಡೆಯಲಾಗುತ್ತಿತ್ತು. ಪ್ರಕೃತ ಸೇವಾ ಪಟ್ಟಿಯು ಧಾರ್ಮಿಕ ದತ್ತಿ ಆಯುಕ್ತರ ಆದೇಶ ಸಂ:ಎಡಿಎಂ.4.ಸಿಆರ್290/12-13 ದಿ:07/03/2013 ರಂತೆ ಮಂಜೂರಾಗಿದ್ದು, ಸದರಿ ಸೇವಾ ಪಟ್ಟಿಯ ಕ್ರ.ಸಂ.1 ರಲ್ಲಿ ಕಾರ್ತಿಕ ಪೂಜೆಯ ಬಾಬ್ತು ರೂ.15/- ಅನ್ನು ಭಂಡಾರಕ್ಕೆ ತೆಗೆದುಕೊಳ್ಳಲು ಮಂಜೂರಾತಿ ಇರುತ್ತದೆ. ಕಾರ್ತಿಕ ಪೂಜೆಯ ಕಮೀಷನ್ ಅನ್ನು ಬಿಟ್ಟು ವಾರದ ಕೊನೆಯದಿನದಲ್ಲಿ ಅರ್ಚಕರಿಗೆ, ದೇವಕಾರಿಗೆ ಮತ್ತು ಶಾಂತಿ ಹಾಗೂ ಇತರೆ ನೌಕರರಿಗೆ ಬಟವಾಡೆ ಮಾಡಲಾಗುತ್ತದೆ.

3. ಕಾರ್ತಿಕ ಪೂಜೆಯ ಬಗ್ಗೆ ದೇವಳದ ತಂತ್ರಿ ಮತ್ತು ಅರ್ಚಕರ ಅಭಿಪ್ರಾಯದಂತೆ ಹೆಚ್ಚುವರಿಯಾಗಿ ಹರಿವಾಣ ಆರತಿ ಮಾಡಿ ಶಾಸ್ತ್ರಬದ್ಧವಾಗಿ ಪೂಜೆ ಮಾಡಲಾಗುತ್ತದೆ ಹಾಗೂ ಕಾರ್ತಿಕ ಪೂಜೆಯ ಬಗ್ಗೆ

ದೂರುದಾರರು ಮಾಡಿರುವ ದೂರಿನ ಬಗ್ಗೆ ಆಗಮನ ಪಂಡಿತರ ಸಲಹೆ ಕೇಳಿ ಮಾನ್ಯ ಜಿಲ್ಲಾಧಿಕಾರಿಯವರ ಪತ್ರ ಸಂ:ಡಿವಿಎಸ್:ಇಎಸ್‌ಟಿ(2)ಸಿಆರ್29/2014-15/82198 ದಿನಾಂಕ 03/11/2014 ರಂದು ಧಾರ್ಮಿಕ ದತ್ತಿ ಆಯುಕ್ತರಿಗೆ ವಿವರವಾದ ವರದಿ ಸಲ್ಲಿಸಲಾಗಿರುತ್ತದೆ. ದೇವಸ್ಥಾನವು ಶೈವಾಗಮ ಸಂಪ್ರದಾಯದ ದೇವಸ್ಥಾನವಾಗಿದ್ದು, ದಿನನಿತ್ಯ ಒಂಭತ್ತು ಪೂಜೆ ಹಿಂದಿನಿಂದಲು ಶಾಸ್ತ್ರಬದ್ಧವಾಗಿ ನಡೆಯುತ್ತಿದ್ದು, ಇದರ ನಡುವೆ ಹೆಚ್ಚುವರಿಯಾಗಿ ಸೀಯಾಳ ಅಭಿಷೇಕ ರುದ್ರಾಭಿಷೇಕ, ಕುಂಕುಮಾರ್ಚನೆ ಹಾಗೂ ಇತರೆ ಸೇವೆಗಳು ಸಹ ಬರುತ್ತಿದ್ದು, ಇಷ್ಟು ಸೇವೆಗಳನ್ನು ನಿಗಧಿತ ಅವಧಿಯಲ್ಲಿ ಮುಗಿಸಲು ಕಷ್ಟಸಾಧ್ಯವಾಗಿರುತ್ತದೆ. ಕಾರ್ತಿಕ ಪೂಜೆಯ ಸೇವೆಯ ಒಂದರ ನಂತರ ಒಂದು ಮಾಡಿದ್ದಲ್ಲಿ ಕಾರ್ತಿಕ ಸೇವೆಯ ದರವನ್ನು ರೂ.150/-ಕ್ಕಿಂತಲೂ ಹೆಚ್ಚಾಗಿ ನಿಗಧಿಪಡಿಸಬೇಕಾಗಿರುತ್ತದೆ. ಹಾಗೂ ಸದರಿ ಸೇವೆಯ ಒಂದಕ್ಕೆ ಅರ್ಧಗಂಟೆಗಿಂತಲೂ ಹೆಚ್ಚು ಸಮಯಬೇಕಾಗುತ್ತದೆ. ಆ ರೀತಿ ಮಾಡಿದ್ದಲ್ಲಿ ದಿನಕ್ಕೆ 10 ಕಾರ್ತಿಕ ಪೂಜೆಯನ್ನು ಮಾಡಬಹುದಾಗಿರುತ್ತದೆ. ಆಗ ಉಳಿದ ಭಕ್ತಾಧಿಗಳಿಗೆ ಕಾರ್ತಿಕ ಪೂಜೆ ಸೇವೆಯನ್ನು ಮಾಡಿಸಲು ಮತ್ತು ಉಳಿದ ಸೇವೆ ನಡೆಸಲು ಅಸಾಧ್ಯವಾಗುತ್ತದೆ. ಇದಲ್ಲದೇ, ಕಾರ್ತಿಕ ಪೂಜೆಯಿಂದ ದೇವಳಕ್ಕೆ ತಿಂಗಳಿಗೆ ಈಗ ಅಂದಾಜು ರೂ.30,000/- ಕ್ಕೂ ಹೆಚ್ಚು ಜಮೆಯಾಗುತ್ತಿದ್ದು, ಉಳಿದ ಸೇವೆಯಿಂದಲೂ ಸಹ ಅದೇ ರೀತಿ ಹಣ ಜಮೆಯಾಗುತ್ತಿದ್ದು, ಈ ಸೇವಾ ಮೊತ್ತದಿಂದ ಆಡಳಿತ ವ್ಯವಹಾರ ನಡೆಯುತ್ತಿರುತ್ತದೆ. ದೂರುದಾರರು ಹೇಳಿರುವಂತೆ ಒಂದು ಸೇವೆಯನ್ನು ಪ್ರತ್ಯೇಕವಾಗಿ ಮಾಡಿದಲ್ಲಿ ಎಲ್ಲ ಸೇವೆಗಳು ದಿನದಲ್ಲಿ ಕನಿಷ್ಟ ಪ್ರಮಾಣದಲ್ಲಿ ಮಾಡಬೇಕಾಗಿರುವುದರಿಂದ, ಆದಾಯವು ಕಡಿಮೆ ಆಗಿ, ದೇವಳಕ್ಕೆ ಆರ್ಥಿಕ ನಷ್ಟ ಉಂಟಾಗುತ್ತದೆ. ಕಾರ್ತಿಕ ಸೇವೆಯ ಪೂಜೆ ದರ ಜಾಸ್ತಿ ಮಾಡಿದ್ದಲ್ಲಿ ಬರುವ ಸೇವಾರ್ತಿಗಳ ಪ್ರಮಾಣವು ಕಡಿಮೆಯಾಗಬಹುದಾಗಿರುತ್ತದೆ. ಆದ್ದರಿಂದ, ಈ ನಿಟ್ಟಿನಲ್ಲಿ ತಂತ್ರಿಗಳ ಮಾರ್ಗದರ್ಶನದಲ್ಲಿ ಎಲ್ಲಾ ಸೇವೆಗಳನ್ನು ಶಾಸ್ತ್ರಬದ್ಧವಾಗಿ ಮಾಡಲಾಗುತ್ತಿದೆ. ಕಾರ್ತಿಕ ಪೂಜೆಯ ಬಗ್ಗೆ ದೇವಳದ ತಂತ್ರಿಗಳ ಅಭಿಪ್ರಾಯದಂತೆ ಹೆಚ್ಚುವರಿಯಾಗಿ ಹರಿವಾಣ ಆರತಿ ಮಾಡಿ ಶಾಸ್ತ್ರಬದ್ಧವಾಗಿ ಸೇವೆಯನ್ನು ನಡೆಸಲಾಗುತ್ತದೆ. ಮುಂದೆ, ಆಗಮ ಪಂಡಿತರು ನೀಡುವ ಸಲಹೆಯನ್ನು ಪರಿಗಣಿಸಿ ಸೇವೆಗಳನ್ನು ನಡೆಸಲಾಗುವುದು. ದೂರುದಾರರು ದೇವಸ್ಥಾನದ ಪಟ್ಟಾ ಜಾಗದಲ್ಲಿ ತನಗೆ ರಸ್ತೆ ನಿರ್ಮಿಸಿಕೊಡಲಿಲ್ಲವೆಂಬ ಕಾರಣಕ್ಕೆ ಹಾಗೂ ಈ ವಿಷಯದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ದೇವಸ್ಥಾನದ ಬಾಬ್ತು ವ್ಯವಹರಿಸಿರುವುದರಿಂದ ದೂರುದಾರರು ಪ್ರಕರಣವನ್ನು ದಾಖಲಿಸಿರುವುದಾಗಿ ಕಂಡು ಬರುತ್ತದೆ. ದೂರುದಾರರು ಮಾಡಿರುವ ಆರೋಪಗಳು ಸುಳ್ಳಿನಿಂದ ಕೂಡಿರುತ್ತದೆ ಎಂದು ತಿಳಿಸಿರುತ್ತಾರೆ.

Sd/-

4. ಸದರಿ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಅದರಲ್ಲಿ ವಿಶ್ವೇಶ್ವರ ದೇವಸ್ಥಾನದಲ್ಲಿ ಭಕ್ತಾಧಿಗಳು ಮಾಡುವ ಸೇವೆ ವ್ಯಾಪಾರ ದೃಷ್ಟಿಯಿಂದ ಆಗಬಾರದಾಗಿರುತ್ತದೆ. ಇದು ಧರ್ಮದಾಯಿ ದತ್ತಿ ಕಾಯ್ದೆ ಕಲಂ 19 2(1)(2) ರಲ್ಲಿ ತಿಳಿಸಿರುವ ಅಂಶಗಳಿಗೆ ವಿರುದ್ಧವಾಗಿರುತ್ತದೆ. ಆದ್ದರಿಂದ, ಕಾರ್ತಿಕ ಪೂಜೆಯ ಸೇವೆಗೆ ಭಕ್ತಾಧಿಗಳಿಂದ ರಶೀದಿ ನೀಡಿ ಪಡೆದ ಹಣವನ್ನು ಕ್ರಿಯಾ ಲೋಪವಿಲ್ಲದೇ ಮಾಡಬೇಕೆಂದು ಹಾಗೆ ಮಾಡದಿದ್ದಲ್ಲಿ ಭಕ್ತಾಧಿಗಳಿಗೆ ವಿಶ್ವಾಸದ್ರೋಹವೆಸಗಿದಂತಾಗುತ್ತದೆ ಎಂದು ಇದು ಕ್ರಿಮಿನಲ್ ಅಪರಾಧವಾಗಿದ್ದು, ಶಿಕ್ಷಾರ್ಹವಾಗಿರುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ ಈ ಬಗ್ಗೆ ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯದತ್ತಿಗಳ ಅಧಿನಿಯಮ 1997ರ ಕಲಂ 19 ಮತ್ತು 20ರನ್ನೊಳಗೊಂಡ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

5. ಪ್ರಕರಣದ ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಎದುರುದಾರರು ದೂರುದಾರರು ನೀಡಿದ್ದ ಅರ್ಜಿಯ ಮೇಲೆ ಮಾನ್ಯ ಜಿಲ್ಲಾಧಿಕಾರಿಗಳು, ಹಿಂದು ಧಾರ್ಮಿಕ ದತ್ತಿ ಇಲಾಖೆ, ಉಡುಪಿ ಇವರಿಗೆ ಪತ್ರವನ್ನು ಬರೆದು, ಶ್ರೀ ಎ.ವ್ಹಿ. ರಮಾನಂದರಾವ್ ಇವರ ದೂರು ಅರ್ಜಿಯ ಬಗ್ಗೆ ದೇವಳದ ಎಲ್ಲ ಸರದಿ ತಂತ್ರಿಗಳ ಮತ್ತು ಸರದಿ ಅರ್ಚಕರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಅವರು ತಮ್ಮ ಲಿಖಿತ ಹೇಳಿಕೆಯಲ್ಲಿ ಭಕ್ತಾಧಿಗಳಿಂದ ಸ್ವೀಕಾರ ಮಾಡಿದ್ದ ಕಾರ್ತಿಕ ಪೂಜಾ ಸೇವಾ ಶುಲ್ಕವನ್ನು ಆ ಸೇವೆಗೆ ವಿನಿಯೋಗಿಸಲಾಗುತ್ತಿದ್ದು, ಸಾಮೂಹಿಕವಾಗಿ ಬೆಳ್ಳಗೆ, ಮಧ್ಯಾಹ್ನ ಮತ್ತು ಸಂಜೆ ಮೂರು ಹೊತ್ತು ಕ್ರಮ ಬದ್ಧವಾಗಿ ನಡೆಯುತ್ತಿದ್ದು, ಇನ್ನು ಮುಂದೆ ಅದಕ್ಕೆ ಉತ್ತಮ ರೀತಿಯಲ್ಲಿ ನಡೆಸಲು ಹೆಚ್ಚುವರಿಯಾಗಿ ಹರಿವಾಣ ಆರತಿ ಅಥವಾ ದೀಪದಾರತಿಯನ್ನು ಉಪಯೋಗಿಸಬಹುದು ಹಾಗೂ ಭಕ್ತಾಧಿಗಳಿಗೆ ಕಲ್ಲು ಸಕ್ಕರೆ ಪ್ರಸಾದ ಕೊಡಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ. ದೂರುದಾರರು ತಿಳಿಸಿರುವಂತೆ ಒಂದೊಂದು ಸೇವೆಯನ್ನು ಪ್ರತ್ಯೇಕವಾಗಿ ಮಾಡಿದಲ್ಲಿ ಎಲ್ಲಾ ಸೇವೆಗಳನ್ನು ದಿನದಲ್ಲಿ ಕನಿಷ್ಟ ಪ್ರಮಾಣದಲ್ಲಿ ಮಾಡಬೇಕಾಗುವುದರಿಂದ ಆದಾಯವು ಕಡಿಮೆಯಾಗಿ ದೇವಳಕ್ಕೆ ಆರ್ಥಿಕ ನಷ್ಟ ಉಂಟಾಗುತ್ತದೆ. ಕಾರ್ತಿಕ ಪೂಜೆ ಸೇವೆಯ ದರವನ್ನು ಹೆಚ್ಚಿಸಿದಲ್ಲಿ ಸೇವೆಯ ಪ್ರಮಾಣವು ಕಡಿಮೆ ಆಗುತ್ತದೆ. ಆದ್ದರಿಂದ, ತಂತ್ರಿಗಳ ಮತ್ತು ಅರ್ಚಕರ ಅಭಿಪ್ರಾಯದಂತೆ ಮೂರು ಹೊತ್ತು ಸಾಮೂಹಿಕವಾಗಿ ಪೂಜೆ ಮಾಡಲಾಗುವುದು ಮತ್ತು ಹೆಚ್ಚುವರಿಯಾಗಿ ಹರಿವಾಣ ಆರತಿ ಮಾಡುವ ಬಗ್ಗೆ ವ್ಯವಸ್ಥಾಪನ ಸಮಿತಿಯ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಹಾಗೂ ಈ ವಿಚಾರದ ಬಗ್ಗೆ ಆಗಮ ಪಂಡಿತರ ಸಲಹೆಯನ್ನು ಪಡೆಯಬಹುದು ಎಂದು ತಿಳಿಸಿರುವುದು ಕಂಡು ಬರುತ್ತದೆ (ಜಿಲ್ಲಾಧಿಕಾರಿ, ಹಿಂದು ಧಾರ್ಮಿಕ ದತ್ತಿ

Sd/-

ಇಲಾಖೆ, ಉಡುಪಿ ಇವರಿಗೆ ಎದುರುದಾರರು ಬರೆದಿರುವ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಈ ಬಗ್ಗೆ ಜಿಲ್ಲಾಧಿಕಾರಿಗಳು ಆಯುಕ್ತರು, ಹಿಂದು ಧಾರ್ಮಿಕ ಸಂಸ್ಥೆ ಮತ್ತು ಧರ್ಮದಾಯದತ್ತಿ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆದು, ಅದರಲ್ಲಿ ದೂರುದಾರರಾದ ಶ್ರೀ ಎ.ವ್ಹಿ. ರಮಾನಂದ ರಾವ್ ರವರು ನೀಡಿರುವ ಅರ್ಜಿಯ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳು, ಶ್ರೀ ವಿಶ್ವೇಶ್ವರ ದೇವಸ್ಥಾನ, ಎಲ್ಲೂರು ಇವರು ಸಲ್ಲಿಸಿರುವ ವರದಿಯ ಬಗ್ಗೆ ಉಲ್ಲೇಖಿಸಿ ದೂರುದಾರರು ಮಾಡಿರುವ ಆರೋಪದ ಬಗ್ಗೆ ಸಂಬಂಧಿಸಿದ ಕಾರ್ಯನಿರ್ವಾಹಣಾಧಿಕಾರಿಯವರು ಸಲ್ಲಿಸಿದ ವರದಿಯ ಮೇರೆಗೆ ತಮ್ಮ ಕಛೇರಿಯ ಧಾರ್ಮಿಕ ಆಗಮ ಪಂಡಿತರ ಅಭಿಪ್ರಾಯ ಪಡೆದು ವರದಿ ಸಲಿಸುವಂತೆ ಕೋರಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಆನಂತರ, ಆಯುಕ್ತರು, ಹಿಂದು ಧಾರ್ಮಿಕ ಸಂಸ್ಥೆ ಮತ್ತು ಧರ್ಮದಾಯ ದತ್ತಿ ಇಲಾಖೆ, ಬೆಂಗಳೂರು ಇವರು ಮುಂದೆ ಸದರಿ ಜಿಲ್ಲಾಧಿಕಾರಿಗಳ ಪತ್ರದ ಮೇಲೆ ಯಾವ ಕ್ರಮ ಜರುಗಿಸಿರುತ್ತಾರೆ ಎಂಬುದರ ಬಗ್ಗೆ ಯಾವ ದಾಖಲೆಗಳನ್ನು ಎದುರುದಾರರು ಹಾಜರುಪಡಿಸಿರುವುದಿಲ್ಲ. ದೂರುದಾರರು ತಿಳಿಸಿದಂತೆ ಕಾರ್ತಿಕ ಪೂಜೆಯನ್ನು ಸಾಮೂಹಿಕವಾಗಿ ನಿರ್ವಹಿಸದೇ ಪ್ರತ್ಯೇಕವಾಗಿ ಒಬ್ಬೊಬ್ಬರ ಹೆಸರಿನಲ್ಲಿ ಪೂಜೆಯನ್ನು ನಿರ್ವಹಿಸಿದಲ್ಲಿ ಎದುರುದಾರರು ತಿಳಿಸಿದಂತೆ ದಿನಕ್ಕೆ 10 ಕಾರ್ತಿಕ ಪೂಜೆಯನ್ನು ನಿರ್ವಹಿಸಬಹುದಾಗಿರುತ್ತದೆ ಎಂದು ಉಳಿದ ಬೇರೆ ಪೂಜೆಯನ್ನು ನಿರ್ವಹಿಸಲು ಸಾಧ್ಯವಿರುವುದಿಲ್ಲವೆಂದು ಕಂಡು ಬರುತ್ತದೆ. ಆದರೆ, ಸಾಮೂಹಿಕವಾಗಿ ಕಾರ್ತಿಕ ಪೂಜೆ ನಿರ್ವಹಿಸುವುದರಿಂದ ಲೋಪ ಉಂಟಾಗುತ್ತದೆ ಎಂಬುದರ ಬಗ್ಗೆ ಆಗಮ ಶಾಸ್ತ್ರಜ್ಞರ ಅಭಿಪ್ರಾಯವನ್ನು ದೂರುದಾರರಾಗಲೀ ಅಥವಾ ಎದುರುದಾರರಾಗಲೀ ಹಾಜರುಪಡಿಸಿರುವುದಿಲ್ಲ. ಇದಲ್ಲದೇ, ಹಲವಾರು ದೇವಸ್ಥಾನಗಳಲ್ಲಿ ಈ ರೀತಿ ಸಾಮೂಹಿಕ ಪೂಜೆಗಳು ನಡೆಯುವುದು ಸಾಮಾನ್ಯವಾಗಿರುತ್ತದೆ. ಇದಲ್ಲದೇ, ದೇವಳದ ಖರ್ಚು ವೆಚ್ಚಗಳನ್ನು ಸಹ ನಿರ್ವಹಿಸುವ ಬಗ್ಗೆ ಗಮನಹರಿಸಬೇಕಾಗಿರುತ್ತದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿದಲ್ಲಿ ದೂರುದಾರರು ಮಾಡಿರುವ ಆರೋಪಕ್ಕೆ ಯಾವುದೇ ಸ್ಪಷ್ಟ ಆಧಾರಗಳಿಲ್ಲವೆಂದು ಕಂಡು ಬರುತ್ತದೆ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರು ಆಯುಕ್ತರು, ಹಿಂದು ಧಾರ್ಮಿಕ ಸಂಸ್ಥೆ ಮತ್ತು ಧರ್ಮದಾಯ, ದತ್ತಿ ಇಲಾಖೆ, ಬೆಂಗಳೂರು ಇವರಿಗೆ ದಿ:03/11/2014 ರ ಪತ್ರದಲ್ಲಿ ತಿಳಿಸಿರುವಂತೆ ಆಯುಕ್ತರ ಕಛೇರಿಯ ಶಾಸ್ತ್ರಜ್ಞರ ಅಭಿಪ್ರಾಯವನ್ನು ಪಡೆದು, ಅದರಂತೆ, ಉಡುಪಿ ಜಿಲ್ಲೆಯ, ಉಡುಪಿ ತಾಲ್ಲೂಕಿನ ಎಲ್ಲೂರಿನ ಶ್ರೀ ವಿಶ್ವೇಶ್ವರ ದೇವಸ್ಥಾನದಲ್ಲಿ ಕಾರ್ತಿಕ**

Sd/-

ಪೂಜಾ ಕೈಂಕರ್ಯಗಳನ್ನು ಸುಸೂತ್ರವಾಗಿ ಕೈಗೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಕೈಗೊಂಡ ಕ್ರಮದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16.3.17

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 16/3/17